ಮೂಲ ದಾವಾ ನಂಃ 74-12 ಪಿ ಡಬ್ಲುಃ 1

ಸಾಕ್ಷಿಯನ್ನು ದಿನಾಂಕಃ 22-10-2019 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಂ ಎಂ ಜೆ ವಕೀಲರಿಂದ

ನಾರಾಯಣ ಗಣಪ ಹೆಗಡೆ ನನ್ನ ಅಜ್ಜ ಅಂದರೆ ಸರಿ. ದಾವಾ ಆಸ್ತಿ ಮತ್ತು ಕೆಲವು ಆಸ್ತಿ ಕೂಡಿ ನನ್ನ ಅಜ್ಜ, ಮಹಾಬಲೇಶ್ವರ ಸುಬ್ರಾಯ ವೈದ್ಯ , ಮಹಾಬಲೇಶ್ವರ ಸುಬ್ರಾಯ ಹೆಬ್ಬಾರ ಮತ್ತು ರಾಮಕೃಷ್ಣ ನರಸಿಂಹ ಭಟ್ ಹೀಗೆ 4 ಜನ ಸೇರಿ ದಾವಾ ಆಸ್ತಿ ಹಾಗೂ ಇನ್ನಿತರ ಆಸ್ತಿಗಳನ್ನು ದಿಃ 26.05.1944 ರಂದು ರೂ 16,000/- ಕ್ಕೆ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ . ಹಾಗೆ ಖರೀದಿ ಮಾಡಿದ ಆಸ್ತಿಗಳನ್ನು ದಿಃ 25.08.1945 ರಂದು ರಿಜಿಷ್ಟ್ರೇಷನ್ ಮೂಲಕ ವಾಂಟಣಿ ದಸ್ತನ್ನು ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಗಣಪತಿ ನಾರಾಯಣ ಹೆಗಡೆ ಇದೇ ನ್ಯಾಯಾಲಯದಲ್ಲಿ ಒಂದು ಮೂಲ ದಾವೆ ದಾಖಲಿಸಿದ್ದರು ಅಂದರೆ ಸರಿ. ಆ ದಾವೆಯನ್ನು ಈ ಮೇಲೆ ಹೇಳಿದ ವಾಂಟಣಿ ದಸ್ತಾವೇಜಿನ ಮೂಲಕ ಬಂದ ಆಸ್ತಿಯ ಬಗ್ಗೆ ಮಾಡಿದ್ದರು ಎಂದರೆ ಸಾಕ್ಷಿ ಸರ್ವೆ ನಂ 401 ರ ಆಸ್ತಿಗೆ ಸಂಬಂಧಿಸಿದಂತೆ ಮಾಡಿದ್ದರು ಎನ್ನುತ್ತಾರೆ. ಆ ದಾವೆಯಲ್ಲಿ ಸರ್ವೆ ನಂ 401/1 ರ ಪೈಕಿ 3 ಎಕರೆ 20 ಗುಂಟೆ ಮತ್ತು 401/3 ರ ಪೈಕಿ 4 ಎಕರೆ 30 ಗುಂಟೆ 8 ಆಣೆ ಸ್ಥಳಗಳ ಕುರಿತು ರವೀಶ ರಾಮಕೃಷ್ಣ ಹೆಗಡೆ, ನಾರಾಯಣ ರಾಮಕೃಷ್ಣ ಹೆಗಡೆ , ರಾಮಕೃಷ್ಣ ನಾರಾಯಣ ಹೆಗಡೆ ಹಾಗೂ ಗೋಪಾಲಕೃಷ್ಣ ರಾಮ ಭಟ್ , ಪ್ರೇಮಚಂದ್ರ ಮಾಧವಾಚಾರಿ, ವಿಶ್ವನಾಥ ಮಾಧವಾಚಾರಿ ಇವರುಗಳ ಮೇಲೆ ದಾಖಲಿಸಿದ್ದರು ಎಂದರೆ ಸಾಕ್ಷಿ ಸರ್ವೆ ನಂ 401 ರ ಒಟ್ಟು ಕ್ಷೇತ್ರಕ್ಕೆ ಸಂಬಂಧಿಸಿದಂತೆ ದಾವೆ ಮಾಡಿದ್ದರು ಎನ್ನುತ್ತಾರೆ. ಆ ದಾವೆಯಲ್ಲಿ ನಾನು ಮುಕ್ತಿಯಾರ್ ನಾಮೆಯಿಂದ ನನ್ನ ಅಜ್ಜನ ಪರವಾಗಿ ನ್ಯಾಯಾಲಯದಲ್ಲಿ ಸಾಕ್ಷಿ ಜವಾಬು ನೀಡಿದ್ದೆ ಎಂದರೆ ಸರಿಯಲ್ಲ . ನಾನು ಆ ದಾವೆಯಲ್ಲಿ ನನ್ನ ತಂದೆಯ ಪರವಾಗಿ ಸಾಕ್ಷಿ ಹೇಳಿದ್ದೆ. ನನ್ನ ತಂದೆ ಆ ದಾವೆಯಲ್ಲಿ ಪಕ್ಷಗಾರರಿದ್ದರು. ಅವರೇ ದಾವೆ ಮಾಡಿದ್ದರು. ಆ ದಾವೆ ಕಿತ್ತು ಹೋಗಿರುತ್ತದೆ ಎಂದರೆ ಸರಿ. ಆ ತೀರ್ಪಿನ ವಿರುದ್ಧ ನನ್ನ ತಂದೆ ಮೇಲ್ಮನವಿ ಸಲ್ಲಿಸಿದ್ದರೋ ಇಲ್ಲವೋ ಗೊತ್ತಿಲ್ಲ. ಆ ದಾವೆಯ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲಾಗಿದೆಯೋ ಇಲ್ಲವೋ ಈವರೆಗೂ ಗೊತ್ತಿಲ್ಲ . ಆ ದಾವೆಯಲ್ಲಿ ಆದ ತೀರ್ಪಿನ ದೃಢೀಕೃತ ನಕಲನ್ನು ನಾನು ಪಡೆದಿರುವುದಿಲ್ಲ. ದಾವಾ ಆಸ್ತಿ ನನ್ನ ತಂದೆಗೆ ನನ್ನ ಅಜ್ಜನಿಂದ ಬಂದ ಆಸ್ತಿ. ನನ್ನ ಅಜ್ಜನಿಗೆ ದಾವಾ ಆಸ್ತಿ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಆ ದಾವೆಯ ತೀರ್ಪಿನಲ್ಲಿ ಏನು ನಿರ್ಣಯವಾಗಿತ್ತು ಎಂದು ನನಗೆ ಗೊತ್ತಿಲ್ಲ.

ದಾವಾ ಆಸ್ತಿ ಹಾಗೂ ಇನ್ನಿತರ ಆಸ್ತಿಗಳ ಕುರಿತು ನನ್ನ ಅಜ್ಜ ಹಾಗೂ ಮೇಲೆ ಹೇಳಿದ ಇತರರು ಸೇರಿ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ . ನನ್ನ ಅಜ್ಜನಿಂದ ಬಂದ ಆಸ್ತಿಯನ್ನು ನನ್ನ ಅಜ್ಜ , ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ವಾಂಟಣಿ ಮಾಡಿಕೊಂಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಹಾಗೂ ನನ್ನ ಅಜ್ಜ ಹಾಗೂ ಇತರರು ಖರೀದಿ ಮಾಡಿದ ಜಾಗದಲ್ಲಿ ಲೋಕಲ್ ಬೋರ್ಡ ರಸ್ತೆ ಹಾದು ಹೋಗಿದೆ ಎಂದರೆ ಸಾಕ್ಷಿ ದಾವಾ ಆಸ್ತಿಯಲ್ಲಿ ಲೋಕಲ್ ಬೋರ್ಡ ರಸ್ತೆ ಹಾದು ಹೋಗಿಲ್ಲ ಎನ್ನುತ್ತಾರೆ . ದಾವಾ ಸರ್ವೆ

ನಂ ನಲ್ಲಿ ಒಟ್ಟು 3 ಪೋಟ್ ಹಿಸ್ಸಾಗಳು ಇವೆ. ಸರ್ವೆ ನಂ 401 ರ ಕುರಿತು ವಾಂಟಣಿ ದಸ್ತಾವೇಜು ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ದಾವಾ ಸರ್ವೆ ನಂ 401 ರ ಸಂಬಂಧ ಮಾಡಿಕೊಂಡ ವಾಂಟಣಿ ದಸ್ತಾವೇಜು ನಾನು ನೋಡಿಲ್ಲ. ಆ ವಾಂಟಣಿ ದಸ್ತಾವೇಜಿನ ಪ್ರಕಾರ ನನ್ನ ಅಜ್ಜನಿಗೆ, ನನ್ನ ತಂದೆಗೆ ಹಾಗೂ ನನ್ನ ಚಿಕ್ಕಪ್ಪನಿಗೆ ಎಷ್ಟು ಕ್ಷೇತ್ರವನ್ನು ವಿಂಗಡಿಸಿಕೊಡಲಾಗಿತ್ತು ನನಗೆ ಗೊತ್ತಿಲ್ಲ . ಕುಟುಂಬದಲ್ಲಿ ವಾಂಟಣಿ ಆಗಿದೆಯೋ ಇಲ್ಲವೋ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.